ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಭದ್ರಾವತಿ

ಕ್ರಿಮಿನಲ್ ಮೊಕದ್ದಮೆ ಸಙ್ಖ್ಯೆ. 6402/2021

ಫ್ರಾ.ಸಾ. :-01

ಚಾ.ಸಾ. :-01

| | | |
|---|---|---|
| ಹೆಸರು | : | ಧನಲಕ್ಷ್ಮೀ |
| ತಂದೆಯ ಹೆಸರು | : | ಪ್ರವೀಣ್ ಕುಮಾರ್ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಉಜ್ಜನೀಪುರ , ಭದ್ರಾವತಿ |

ಪ್ರಮಾಣೀಕರಿಸಲಾದ ದಿನಾಂಕಃ- **18.05.2023**

**ಮುಖ್ಯ ವಿಚಾರಣೆಃ-** ಮಾನ್ಯ ಸ. ಸ. ಅ. ರವರಿಂದ:-

ಚಾಸಾ-2 ಮತ್ತು ನನ್ನ ತಂದೆ ತಾಯಿ . ಚಾಸಾ-4 ನನ್ನ ಅಣ್ಣ , ಚಾಸಾ-5 ಮತ್ತು 6 ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ , ಚಾಸಾ-7 ರವರು ಚಾಸಾ-5 ರವರ ಮಗ . ಚಾಸಾ-8 ಹಾಗೂ 9 ಗೊತ್ತು . ಚಾಸಾ-14 ರಿಂದ 20 ಗೊತ್ತು .

1 ಮತ್ತು 2 ನೇ ಆರೋಪಿತರು ಈ ದಿನ ಗೈರು ಹಾಜರಾಗಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿತರ ಗುರುತಿಸುವಿಕೆ ಕುರಿತಾಗಿ ತಮ್ಮ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಅವರನ್ನು ಪುನಃ ನೋಡಿದರೆ ಗುರುತಿಸುತ್ತೇನೆ. ಉಳಿದ ಆರೋಪಿತರು ಹಾಜರಿದ್ದಾರೆ .

ದಿನಾಂಕ 09.06.2019 ರಂದು ಭದ್ರಾವತಿಯ ಜನ್ನಾಪುರದ ಮಲ್ಲೇಶ್ವರ ಸಭಾ ಭವನದಲ್ಲಿ 1 ನೇ ಆರೋಪಿಯವರೊಂದಿಗೆ ನನ್ನ ಮದುವೆ ಆಗಿದೆ . ವರೋಪಚಾರದ ರೂಪದಲ್ಲಿ ಬಂಗಾರದ ಸರ , ಒಡವೆಗಳು ಹಾಗೂ ರೂ.3 ಲಕ್ಷ ಹಣವನ್ನು ನಗದು ರೂಪದಲ್ಲಿ ಕೊಡಲಾಗಿತ್ತು . ನನ್ನ ತವರು ಮನೆಯಿಂದ ಅಂದಾಜು 150 ಗ್ರಾಂ ಬಂಗಾರವನ್ನು ನನಗೆ ಮದುವೆ ಕಾಲಕ್ಕೆ ಕೊಟ್ಟಿದ್ದರು .

ಮದುವೆ ನಂತರ ನನ್ನನ್ನು ಕೆ ದಾಸಾಪುರದ ಗಂಡನ ಮನೆಗೆ ಕರೆದುಕೊಂಡು ಹೋದರು . ಗಂಡನ ಮನೆಯಲ್ಲಿ ನಾನು ಈ ಕೇಸಿನ ಆರೋಪಿತರೊಂದಿಗೆ ವಾಸವಿದ್ದೆ . ಆಷಾಡ ಮಾಸದ ಕಾಲಕ್ಕೆ ನಾನು ನ್ನನ ತವರು ಮನೆಗೆ ಬಂದಿರುತ್ತೇನೆ . ನನ್ನ ಒಡವೆಗಳೆಲ್ಲಾ ಗಂಡನ ಮನೆಯಲ್ಲೇ

ಇಟ್ಟುಕೊಂಡಿದ್ದರು . ಆಷಾಡ ಮುಗಿಸಿ ಗಂಡನ ಮನೆಗೆ ಹೋದಾಗ ಒಡವೆಗಳನ್ನು ಬ್ಯಾಂಕಿನಲ್ಲಿ ಇಟ್ಟಿದ್ದಾರೆಂಬ ವಿಚಾರ ತಿಳಿಯಿತು . ಅದನ್ನು ಕೇಳಿದ ಕಾರಣ ನನಗೆ ಹಣದ ತೊಂದರೆಯಿದೆ , ನಿನ್ನತಂದೆ ತಾಯಿ ಇಂದ ಹಣವನ್ನು ತರುವಂತೆ ಪ್ರತೀ ದಿನ ನನಗೆ ಹಿಂಸೆ ನೀಡಿದರು .

ಈ ವಿಚಾರ ನನ್ನ ಪೋಷಕರ ಗಮನಕ್ಕೆ ತಂದ ನಂತರ ಅವರು 4 ನೇ ಆರೋಪಿ ಖಾತೆಗೆ ರೂ.50000 ಹಣವನ್ನು ದಿನಾಂಕ 07.08.2019 ಕ್ಕೆ ಹಾಗೂ ರೂ.80000 ಹಣವನ್ನು ದಿನಾಂಕ 14.08.2019 ಕ್ಕೆ ಜಮಾ ಮಾಡಿರುತ್ತಾರೆ . ರೂ.30000 ಹಣವನ್ನು ಚಾಸಾ-5 ಮತ್ತು 6 ರವರಿಂದಲೂ ನಗದಾಗಿ ಪಡೆದಿದ್ದರು .

1 ನೇ ಆರೋಪಿ ಆತ ಬೆಂಗಳೂರಿನಲ್ಲಿ ಭಾರತಿ ಸೀಮೆಂಟಿನಲ್ಲಿ ಸಿವಿಲ್ ಇಂಜಿಯರ್ ಆಗಿ ಕೆಲಸ ಮಾಡುತ್ತಿದ್ದರು . ಬೆಂಗಳೂರಿನಲ್ಲಿ ಆತ ವಾಸವಿದ್ದ ಮನೆಗೆ ನನ್ನನ್ನು ಕರೆದುಕೊಂಡು ಹೋದರು . ಅಲ್ಲಿಯೂ ಸಹ ನನಗೆ ಹಿಂಸೆ ನೀಡಿರುತ್ತಾರೆ .ಮನೆಯಲ್ಲಿದ್ದ ವಸ್ತಗಳನ್ನು ಒಡೆಯುವುದು , ನನಗೆ ಊಟ ಸರಿಯಾಗಿ ನೀಡದೇ ಇರುವುದನ್ನು ಮಾಡುತ್ತಿದ್ದರು . ಗಂಡನ ರೀತಿ ನಡೆದುಕೂಳ್ಳಬೇಕಾದಲ್ಲಿ ಹಣ ನೀಡುವಂತೆ ಇಲ್ಲವಾದಲ್ಲಿ ನಿನಗೆ ವಿಚ್ಚೇದನೆ ನೀಡಿ ನಾನು ಮತ್ತೂಂದು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳುತ್ತಿದ್ದರು .

ನನ್ನ ಪೋಷಕರಿಗೆ ನನ್ನ ಅತ್ತೆ ಮಾವ ಅಂದರೆ ಈ ಕೇಸಿನ 2 ಹಾಗೂ 3 ನೇ ಆರೋಪಿತರು ಬೆಂಗಳೂರಿನಲ್ಲಿರುವ ಸೈಟನ್ನು ಮಾರಿ ಹಣ ಕೊಡುವಂತೆ ಕೇಳುತ್ತಿದ್ದರು . ರೂ.20 ಲಕ್ಷ ಹಣ ಕೊಟ್ಟರೆ ಮಾತ್ರ ನಿನ್ನ ಜೊತೆ ಗಂಡನ ರೀತಿ ಇರುತ್ತೇನೆಂದು ಹೇಳುತ್ತಾ ಕೆಟ್ಟದಾಗಿ ಮಾತನಾಡುತ್ತಿದರು . ತಾಳಿಯನ್ನು ಕೊಡುವಂತೆ ನನಗೆ ಹೊಡಿ ಬಡಿ ಮಾಡಿ ಅದನ್ನು ದಿನಾಂಕ 29.12.2019 ರಂದು 1 ನೇ ಆರೋಪಿ ಕಿತ್ತುಕೊಂಡಿರುತ್ತಾರೆ.

ನನ್ನ ತಾಯಿ ನನಗೆ ದೂರವಾಣಿ ಕರೆ ಮಾಡಿರುತ್ತಾರೆ , ಅವರಿಗೆ ನಾನು ವಿಚಾರ ತಿಳಿಸಿದಂತೆ ನನ್ನ ಅಣ್ಣ , ಚಿಕ್ಕಮ್ಮ ಬಂದು ನನ್ನನ್ನು ಅಲ್ಲಿಂದ ಕರೆದುಕೊಂಡು ಬಂದರು . ನನ್ನ ಅಣ್ಣ ಹಾಗೂ ಚಿಕ್ಕಮ್ಮನವರು ಆರೋಪಿತರಲ್ಲಿ ವಿಚಾರಿಸಲು ಹೋದಾಗ ಅವರ ಜೊತೆಯಲ್ಲಿಯೂ ಗಲಾಟೆ ಮಾಡಿ ಅವರಿಗೂ ಕೆಟ್ಟ ಪದಗಳ ಬಳಕೆ ಮಾಡಿ ಬೈದಿರುತ್ತಾರೆ ಹಾಗೂ ಪಂಚಾಯತಿ ಸಹ ಆಗಿರುತ್ತದೆ.

ಸ್ವಲ್ಪ ದಿನ ಸರಿಯಾಗಬಹುದೆಂದು ನನ್ನ ಪೋಷಕರು ನನ್ನ ತವರು ಮನೆಗೆ ಕರೆತಂದರು, ಆದರೂ ನನ್ನ ತವರು ಮನೆಗೂ ಸಹ ಬಂದು ಜಗಳ ಮಾಡಿರುತ್ತಾರೆ . ಅಲ್ಲಿ 1 ನೇ ಆರೋಪಿ ದುಡ್ಡನ್ನು ಕೊಟ್ಟರೆ ಮಾತ್ರ ನೀನು ನನ್ನಜೊತೆ ಬರಬಹುದೆಂದು ಗಲಾಟೆ ಮಾಡಿ , ನನ್ನ ಕುತ್ತಿಗೆ ಹಿಸುಕಿ, ನನ್ನ ಎಡಕಪಾಲದ ಭಾಗಕ್ಕೆ ಹಲ್ಲೆ ಮಾಡಿರುತ್ತಾರೆ . ನನ್ನ ಚೀರಾಟ ಕೇಳಿ ಅಕ್ಕಪಕ್ಕದ

ಮನೆಯವರು ಬಂದು ಬಿಡಿಸಿರುತ್ತಾರೆ . ಆಗ 1 ನೇ ಆರೋಪಿ ನಿನ್ನನ್ನು ಸಾಯಿಸುತ್ತೇನೆಂದು ನನಗೆ ಹೇಳಿರುತ್ತಾರೆ .

ಕೋವಿಡ್ ಕಾರಣಕ್ಕಾಗಿ ನನ್ನ ಅಜ್ಜಿ ಮೃತರಾದರು . 14 ದಿನಗಳ ಕಾಲ ಹೋಂ ಕ್ವಾರೆಂಟೈನಲ್ಲಿ ನಾವು ಇದ್ದ ಕಾರಣ ನಿಗದಿತ ಅವಧಿ ಮುಕ್ತಾಯಗೊಂಡ ನಂತರದಲ್ಲಿ ಈಗ ನೋಡಿದ ದಾಖಲೆಯಂತೆ ನಾನು ದೂರನ್ನು ನೀಡಿರುತ್ತೇನೆ , ಅದರಲ್ಲಿ ನನ್ನ ಸಹಿ ಇರುತ್ತದೆ , ಸದರಿ ದಾಖಲೆಯನ್ನು ನಿಪಿ–1 ಎಂದು ಸದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ–1 ಎ ಎಂದು ಗುರುತಿಸಲಾಯಿತು.

ದಿನಾಂಕ 31.08.2020 ರಂದು ನಾನು ವಾಸವಿದ್ದ ನನ್ನ ತವರು ಮನೆಯಲ್ಲಿ ಈಗ ನೋಡುತ್ತಿರುವ ದಾಖಲೆಯಂತೆ ಪೊಲೀಸರು ಮಹಜರ್ ಮಾಡಿದರು ಅದರಲ್ಲಿ ನನ್ನ ಸಹಿ ಇರುತ್ತದೆ, ಅದನ್ನು ನಿಪಿ–2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–2 ಎ ಎಂದು ಗುರುತಿಸಲಾಯಿತು. ಚಾಸಾ–15 ಮತ್ತು 16 ರವರು ನಿಪಿ–2 ರ ಕಾಲಕ್ಕೆ ಹಾಜರಿದ್ದರು . ನಿಪಿ–2 ರ ಕ್ರಮವನ್ನು ಬೆಳಗ್ಗೆ 10.30 ರಿಂದ 11.30 ರ ಅವಧಿಯಲ್ಲಿ ಜರುಗಿಸಿದರು .

ಈಗ ನೋಡುತ್ತಿರುವ 2 ಪೋಟೊಗಳಲ್ಲಿ ತಾನು ಕಾಣುವುದಾಗಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–3 ಮತ್ತು 4 ಎಂದು ಗುರುತಿಸಲಾಯಿತು. ನಿಪಿ–3 ಮತ್ತು 4 ನ್ನು ನಿಪಿ–2 ರ ಕಾಲಕ್ಕೆ ತೆಗೆದರು .

ದಿನಾಂಕ 08.09.2020 ರಂದು ನಾನು ಮತ್ತು 1 ನೇ ಆರೋಪಿ ಬೆಂಗಳೂರಿನ ನಾಗರಬಾವಿಯಲ್ಲಿ ವಾಸವಿದ್ದ ಮನೆಯಲ್ಲಿ ಈಗ ನೋಡುತಿರುವ ದಾಖಲೆಯಂತೆ ಮಹಜರ್ ಮಾಡಿದರು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ನಿಪಿ–5 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–5 ಎ ಎಂದು ಗುರುತಿಸಲಾಯಿತು. ನಿಪಿ–5 ರ ಕಾಲಕ್ಕೆ ಚಾಸಾ–17 ಮುತ್ತ 18 ರವರು ಹಾಜರಿದ್ದು ಅವರುಗಳು ಸಹಿ ಮಾಡಿರುತ್ತಾರೆ . ನಿಪಿ–5 ನ್ನು ಮದ್ಯಾಹ್ನ 3 ರಿಂದ 4 ರ ಅವಧಿಯಲ್ಲಿ ಜರುಗಿಸಿದರು. ಈಗ ನೋಡುತ್ತಿರುವ 2 ಪೊಟೊಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–6 ಮತ್ತು 7 ಎಂದು ಗುರುತಿಸಲಾಯಿತು. ನಿಪಿ–6 ಮತ್ತು 7 ನ್ನು ನಿಪಿ–5 ರ ಜರುಗಿಸಿದ ಕಾಲಕ್ಕೆ ತೆಗೆದರು .

ಈಗ ನೋಡುತ್ತಿರುವ ದಾಖಲೆಗೆ ದಿನಾಂಕ 21.09.2020 ರಂದು ಸರ್ಕಲ್ ಇನ್ಸ್ಪೆಕ್ಟರ್‌ರವರ ಕಚೇರಿಯಲ್ಲಿ ಸಹಿಯನ್ನು ಮಾಡಿರುತ್ತೇನೆ , ಸದರಿ ದಾಖಲೆಯನ್ನ ನಿಪಿ–8 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–8 ಎ ಎಂದು ಗುರುತಿಸಲಾಯಿತು. ನಿಪಿ–8 ರ ಕಾಲಕ್ಕ ಚಾಸಾ–19 ಮತ್ತು 20

ಹಾಜರಿದ್ದು ಅವರು ಸಹಿ ಮಾಡಿರುತ್ತಾರೆ . ನಿಪಿ–8 ನ್ನು ಮಧ್ಯಾಹ್ನ 12 ರಿಂದ 1.30 ರ ಅವಧಿಯಲ್ಲಿ ಜರುಗಿಸಿದರು .

ನಿಪಿ–8 ರ ಕಾಲಕ್ಕ ನಾನು ನನ್ನ ಹಾಗೂ 1 ನೇ ಆರೋಪಿ ವಿವಾಹ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–9 ಎಂದು ಗುರುತಿಸಲಾಯಿತು. ಮದುವೆ ಕಾಲಕ್ಕೆ ತೆಗೆಯಲಾದ 7 ಪೊಟೊಗಳು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-10 ರಿಂದ 16 ಎಂದು ಗುರುತಿಸಲಾಯಿತು. ಮಲ್ಲೇಶ್ವರ ಸಮುದಾಯ ಭವನದ 9 ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ–17 ಎಂದು ಗುರುತಿಸಲಾಯಿತು. ವಾದಿರಾಜ್ ಜುವೆಲ್ಸಿನ 8 ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ–18 ಎಂದು ಗುರುತಿಸಲಾಯಿತು. ಜಿ ಕೆ ಜುವೆಲ್ಲರ್ಸಿನ 4 ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ–19 ಎಂದು ಗುರುತಿಸಲಾಯಿತು. ಹಣ ಜಮಾ ಮಾಡಿರುವ ಕುರಿತಾಗಿ 3 ಪೇಯಿಂಗ್ ಸ್ಲಿಪ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-20 ರಿಂದ 22 ಎಂದು ಗುರುತಿಸಲಾಯಿತು. ಸ್ಟೇಟ್ಮೆಂಟ್ ಆಪ್ ಅಕೌಂಟ್ಸಿನ ದಾಖಲೆಯನ್ನು ನಿಪಿ–23 ಎಂದು , ಬ್ಯಾಂಕಿನವರು ಈ ಕೇಸಿನ ತನಿಖಾಧಿಕಾರಿಗೆ ನೀಡಿರುವ ಪತ್ರವನ್ನು ನಿಪಿ-24 ಎಂದು ಗುರುತಿಸಲಾಯಿತು. ನನ್ನ ಅಜ್ಜಿ ಜಯಲಕ್ಷ್ಮಮ್ಮನವರ ಡೆತ್ ಸಮ್ಮರಿ ದಾಖಲೆಯನ್ನು ನಿಪಿ–25 ಎಂದು ಗುರುತಿಸಲಾಯಿತು. ಸಿ ಡಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–26 ಎಂದು ಗುರುತಿಸಲಾಯಿತು.

**ಆರೋಪಿತರ ಪರವಾಗಿ ಪಾಟೀ ಸವಾಲುಃ**- ಶ್ರೀ ಎಸ್ ಆರ್ ಕೆ ವಕೀಲರಿಂದಃ-

ನಾನು ಇಂಜಿಯರ್ ಪಧವೀದರಳಾಗಿರುತ್ತೇನೆ. ನಾನು ಗೃಹಿಣಿಯಾಗಿರುತ್ತೇನೆ . ಮದುವೆಯ ಕುರಿತಾಗಿ ವರೋಪಚಾರವಾಗಿ ನನ್ನ ಎದುರಿನಲ್ಲಿ ಮಾತುಕತೆ ಆಗಿಲ್ಲ ಎಂದರೆ ಸರಿ . ಮದುವೆ ನಂತರ ನನ್ನ ಗಂಡನ ಮನೆಗೆ ಕರೆದುಕೊಂಡು ಹೋದರು ಮತ್ತು ಮದುವೆ ನಂತರದ ಶಾಸ್ತ್ರ, ಕಾರ್ಯಕ್ರಮ ಗಂಡನ ಮನೆಯಲ್ಲಾಯಿತು ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓ. ಹೇ. ಕೇ. ಸ. ಇ. ಎ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಭದ್ರಾವತಿ